ಈ) ಖಾಸಗಿ ಹಿಡುವಳಿ ಜಮೀನಿನಲ್ಲಿಯ ಮರಗಳನ್ನು ವೃಕ್ಷಾಧಿಕಾರಿಯ ಪೂರ್ವಾನುಮತಿ ಪಡೆಯದೆ ಕಡಿದರೆ ಗುನ್ನೆ ಪ್ರಕರಣ (offence case) ದಾಖಲು ಮಾಡಿಕೊಂಡು ಕಡಿದ ಮರಗಳಿಂದ ತಯಾರಿಸಿದ ಕಟ್ಟಿಗೆಯನ್ನು ಜಪ್ತಿ ಮಾಡಿ ವಶಪಡಿಸಿಕೊಳ್ಳಲಾಗುತ್ತಿದೆ. ಇದಲ್ಲದೆ ಗುನ್ನೆ ಪ್ರಕರಣವನ್ನು ರಾಜಿ ಕಬೂಲಿಯಿಂದ ಬಗೆಹರಿಸಿಕೊಂಡರೆ, ಪರವಾನಗಿ ಪಡೆಯದೆ ಮರ ಕಡಿದಿರುವುದಕ್ಕೆ ದಂಡ ಹಾಕಲಾಗುತ್ತದೆ ಮತ್ತು ಕಡಿದ ಮರದಿಂದ ತಯಾರಿಸಿದ ಕಟ್ಟಿಗೆಯನ್ನು ಅದರ ಕಿಮ್ಮತ್ತು ವಸೂಲು ಮಾಡಿ ಬಿಟ್ಟು ಕೊಡಲಾಗುತ್ತಿದೆ.

ವಿಷಯ:- ಭಾರತೀನಗರ ವ್ಯಾಪ್ತಿಯಲ್ಲಿ ಬರುವ ಪ್ರಥಮ ದರ್ಜೆ ಕಾಲೇಜುಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 249(616)

ಶ್ರೀ ಎನ್. ರಾಜಣ್ಣ (ಭಾರತೀನಗರ):- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಭಾರತೀನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ?

2) ಅವುಗಳಲ್ಲಿ ಎಷ್ಟು ಕಾಲೇಜುಗಳಿಗೆ ಸರಿಯಾಗಿ ಪೀಠೋಪಕರಣಗಳು ಮತ್ತು ಕಪ್ಪು ಹಲಗೆಗಳನ್ನು ಒದಗಿಸಿರುವುದಿಲ್ಲ.

3) 1994-95ನೇ ಸಾಲಿನಲ್ಲಿ ಪೀಠೋಪಕರಣಗಳಿಗಾಗಿ ಮತ್ತು ಕಪ್ಪು ಹಲಗೆ ಒದಗಿಸುವುದಕ್ಕಾಗಿ ಖರ್ಚಾಗಿರುವ ಮೊತ್ತ.

4) ಸರ್ಕಾರದ ಭಾರತೀನಗರ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಪೀಠೋಪಕರಣ ಮತ್ತು ಇತರೇ ಉಪಕರಣಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳುವುದೇ.

ಶ್ರೀ ಡಿ.ಮಂಜುನಾಥ್(ಉನ್ನತ ಶಿಕ್ಷಣ ಸಚಿವರು):-

1) ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದೇ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಇಲ್ಲ.

2) ಉದ್ಭವಿಸುವುದಿಲ್ಲ

3) ಉದ್ಭವಿಸುವುದಿಲ್ಲ

4) ಉದ್ಭವಿಸುವುದಿಲ್ಲ

ವಿಷಯ:- ಭಾರತೀನಗರ ವ್ಯಾಪ್ತಿಯಲ್ಲಿ ಬರುವ ಶಾಲೆಗಳಲ್ಲಿ ಕೊಠಡಿ ಕೊರತೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 250(615)

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

1. ಭಾರತೀನಗರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಪ್ರಾಥಮಿಕ ಶಾಲೆಗಳು, ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಸಂಖ್ಯೆ.

2. 34 ತರಗತಿಗಳು ಒಂದೇ ಕೊಠಡಿಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಮೇಲಿನ ಕ್ಷೇತ್ರದಲ್ಲಿ ಕೆಲವು ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗಿಂತ ಶಿಕ್ಷಕರ ಸಂಖ್ಯೆ ಜಾಸ್ತಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4. ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಹೆಚ್ಚುವರಿ ಕೊಠಡಿಗಳು ಅವಶ್ಯಕತೆ ಇರುವ ಕಡೆ ಕೊಠಡಿಗಳ ನಿರ್ಮಾಣಕ್ಕೆ ಮತ್ತು ಅವಶ್ಯವಿರುವ ಶಿಕ್ಷಕರ ಹುದ್ದೆಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗಿದೆಯೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು):-

1. ಪ್ರಾಥಮಿಕ ಶಾಲೆಗಳು - 26
2. ಪ್ರೌಢ ಶಾಲೆಗಳು - 1
3. ಪದವಿ ಪೂರ್ವ ಕಾಲೇಜುಗಳು - ಇಲ್ಲ